ಮಾತಿಗೆ ಅವನು ಉತ್ತರ ಕೊಡಲಿಲ್ಲ.

'ಎಂಥಾ ಜುಗ್ಗಾನೊ ನೀನು. ಏನಾದರೂ ಕೊಡಿಸ್ತೀಯ ಅಂದುಕೊಂಡಿದ್ದೆ. ಕಡೆಗೆ ಕಾಫಿ ಕಾಸನ್ನೂ ನನ್ನಿಂದಾನೇ ಕೊಡಿಸ್ದೆ'.

'ಸಾರಿ, ನಾನು ಬೆಳಿಗ್ಗೆ ಬರುವ ಆತುರದಲ್ಲಿ ಪರ್ಸ್ ಮರೆತು ಬಂದುಬಿಟ್ಟೆ. ಕ್ಯಾಶ್, ಕಾರ್ಡ್ ಎರಡೂ ಪರ್ಸಲ್ಲಿ ಉಳಿದುಬಿಟ್ಟು. ಐಯ್ಯಾಮ್ ನಾಟ್ ಯೂಸ್ಡ್ ಟು ಫೋನ್ ಪೇ. ನನ್ನ ಅಕೌಂಟ್‌ನಲ್ಲಿ ಬೇಕಾದಷ್ಟು ಅಮೌಂಟ್ ಇದೆ. ಜಿ ಪೇ ಡೌನ್ಲೋಡ್ ಮಾಡಿಕೊಡು ನನ್ನ ಮೊಬೈಲ್‌ಗೆ. ಎಷ್ಟು ಮೊತ್ತದ ಹಣವಾದರೂ ಚಿಂತಿಸಬೇಡ' ಸಾವಧಾನವಾಗಿ ಹೇಳಿದ್ದ ಆಸ್ಕರ್ ವೈಲ್ಡ್.

'ತಮಾಷೆಗೆ ಹೇಳಿದೆ ಡಿಯರ್, ನನಗೆ ಗೊತ್ತಿಲ್ವಾ ನಿಮ್ಮ ಫ್ಯಾಮಿಲಿ ಮ್ಯಾಗ್ನಾನಿಮಿಟಿ. ನನ್ನನ್ನು ಭೇಟಿಯಾದ ದಿನವೇ ಅಷ್ಟೊಂದು ಬೆಲೆಯ ನೆಕ್ಲೇಸನ್ನು ಗಿಫ್ಟಾಗಿ ಕೊಟ್ಟಿರಲ್ಲ. ಮುಂದಿನ ತಿಂಗಳು ಒಂದುವಾರ ಲಾಸ್ ವೇಗಾಸ್‌ಗೆ ಹೋಗಿ ಬರೋಣವಾ? ಆ ಎಕ್ಸ್‌ಪೀರಿಯನ್ಸ್ ಅದ್ಭುತವಾಗಿರುತ್ತೆ. ಅಪ್ಪನಿಗೆ ಹೇಳಿದ್ರೆ ಅರೆಂಜ್ ಮಾಡ್ತಾನೆ. ಹೇಗೂ ನನ್ನ ಫ್ರೆಂಡ್ ಮೈಥಿಲಿ ಲೆವಿನ್ಸ್ ಅಲ್ಲಿದ್ದಾಳೆ. ಅಲ್ಲಿ ಅವರದ್ದು ದೊಡ್ಡ ಹೋಟೆಲ್ ಬಿಸಿನೆಸ್ ಇದೆ. ಜೊತೆಗೆ ವೆಲ್ ಫ್ಲರಿಷ್ಡ್ ಟ್ರಾವೆಲ್ಸ್ ಕಂಪನಿ ಕೂಡ ಇದೆ. ಒಂದು ವಾರ ಜೊತೆಯಲ್ಲಿ ಇದ್ದರೆ ಮದುವೆಗೆ ಮೊದಲೇ ನಾವು ಒಬ್ಬರನ್ನೊಬ್ಬರು ಚನ್ನಾಗಿ ಅರಿತುಕೊಳ್ಳಲು ಅನುಕೂಲವಾಗುತ್ತದೆ. ನಿಮ್ಮ ಮನೆಯಲ್ಲಿ ಒಪ್ಪಿದರೆ ಮೆಸೇಜ್ ಮಾಡು. ನಾವು ಲಾಸ್ ವೇಗಾಸ್‌ಗೆ ಹೋಗುವ ದಿನ ಏರ್‌ಪೋರ್ಟಿನಲ್ಲಿ ಭೇಟಿ ಆಗೋಣ. ಅದುವರೆಗೂ ನಮ್ಮ ಭೇಟಿಗೆ ಇಂಟರ್ವಲ್ ಇರಲಿ' ಎಂದಿದ್ದಳು.

ಅವಳ ಮಾತು ಆಸ್ಕರ್ ವೈಲ್ಡನಿಗೆ ಚನ್ನಾಗಿಯೇ ಹಿಡಿಸಿತ್ತು. ಪಾಸ್‌ಪೋರ್ಟ್ ಆರೇಳು ವರ್ಷಗಳ ಹಿಂದೆಯೇ ಮಾಡಿಸಿದ್ದರೂ ಅವನು ವಿಮಾನ ಹತ್ತಿ ಹೊರ ದೇಶಗಳಿಗೆ ಹೋಗಿರಲಿಲ್ಲ. ಪೂರ್ವಿಕಾಳ ಮಾತುಗಳು ಅವನಲ್ಲಿ ಲಾಸ್ ವೇಗಾಸ್ ನೋಡುವ ಉತ್ಕಟ ಬಯಕೆಯನ್ನು ಹುಟ್ಟುಹಾಕಿದ್ದವು. ಮನೆಗೆ ಹೋಗುತ್ತಲೇ ಆಸ್ಕರ್ ವೈಲ್ಡ್ ಪೂರ್ವಿಕಾ ಹೇಳಿದ ಸಂಗತಿಯನ್ನು ಪ್ರಸ್ತಾಪ ಮಾಡಿದ್ದ. ಎಲ್ಲರೂ ಒಪ್ಪಿದ್ದರು. ಹಾಗಾಗಿ ಅವನು 'ಡೀಲ್ ಓಕೆ' ಎಂದು ಲವ್ ಸಿಂಬಲ್‌ನೊಂದಿಗೆ ಪೂರ್ವಿಕಾಳಿಗೆ ಮೆಸೇಜ್ ಮಾಡಿದ್ದ. ಲಾಸ್ ವೇಗಾಸ್‌ಗೆ ಹೋಗಿ ಬಂದ ನಂತರದ ತಿಂಗಳೊಳಗಾಗಿ ಮದುವೆ ಮಾಡಿ ಮುಗಿಸಬೇಕೆಂದು ವೈಲ್ಡನ ಮನೆಯಲ್ಲಿ ಮಾತನಾಡಿಕೊಂಡರು.

ಎಂಟು ದಿನಗಳಲ್ಲಿ ಇಬ್ಬರ ವೀಸಾ ರೆಡಿಯಾಗಿದ್ದವು. ಮೈಥಿಲಿ ಲೆವಿನ್ಸ್ ತನ್ನ ಟ್ರಾವೆಲ್ ಏಜೆನ್ಸಿ ಮೂಲಕ ಮಾಡಿಸಿದ್ದಳು. ಲಾಸ್ ವೇಗಾಸ್‌ಗೆ ಹೊರಡಲು ಹದಿನೈದು ದಿನ ಬಾಕಿ ಉಳಿದಿತ್ತು. ಎಕ್ಸ್‌ಪೋರ್ಟ್ ಬಿಸಿನೆಸ್ ಮೇಲೆ ಭವರ್ ಲಾಲ್ ಅನೇಕ ಬಾರಿ ವಿದೇಶಗಳಿಗೆ ಪ್ರಯಾಣ ಮಾಡಿದ್ದಿದೆ. ಆಗೆಲ್ಲಾ ಭವರ್ ಲಾಲನ ಗುರಿ ಬಿಸಿನೆಸ್ ಎಸ್ಟಾಬ್ಲಿಷ್ ಮಾಡುವುದೇ ಆಗಿತ್ತು. ಬಿಸಿನೆಸ್ ಸ್ಟ್ಯಾಂಡ್ ಆದ ನಂತರ ಭವರ್ ಲಾಲ್ ವಿದೇಶಗಳಿಗೆ ಹೋಗಿದ್ದೇ ಕಡಿಮೆ. ಕಮಾಡಿಟಿ ಕ್ವಾಲಿಟಿ ಓಕೆ ಮಾಡಲು ವಿದೇಶಿ ಕಂಪನಿಗಳ ಪ್ರತಿನಿಧಿಗಳೇ ಇಲ್ಲಿಗೆ ಬರುತ್ತಿದ್ದರು. ಅವರನ್ನೆಲ್ಲಾ ಅವರು ಬಯಸಿದ ಹೋಟೆಲ್‌ಗಳಲ್ಲಿ ಇರಿಸಿ ಒಳ್ಳೆಯ ಆತಿಥ್ಯ ನೀಡುತ್ತಿದ್ದ. ವಿದೇಶಿ ವ್ಯಾಪಾರದಲ್ಲಿ ಆತ್ಮೀಯ ಸಂಬಂಧಗಳನ್ನು ಕಾಯ್ದುಕೊಂಡಿದ್ದರಿಂದಾಗಿ ಮತ್ತು ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಸರಬರಾಜು ಮಾಡುತ್ತಿದ್ದುದ್ದರಿಂದಾಗಿ ಹಣ ಪಾವತಿಯಲ್ಲಿ ಸ್ವಲ್ಪವೂ ತೊಂದರೆಗಳಾಗುತ್ತಿರಲಿಲ್ಲ. ಆದರೆ ಪ್ರವಾಸಕ್ಕೆಂದು ಭವರ್ ಲಾಲ್ ಕುಟುಂಬ ಸದಸ್ಯರನ್ನು ಯಾವತ್ತೂ ವಿದೇಶಗಳಿಗೆ ಕರೆದುಕೊಂಡು ಹೋಗಿರಲಿಲ್ಲ. ತಾಯಿ ಮತ್ತು ಹೆಂಡತಿ ಅದನ್ನು ಯಾವಾಗಲೂ ಬಯಸಿರಲಿಲ್ಲ ಕೂಡ. ಹಾಗಾಗಿ ಆಸ್ಕರ್ ವೈಲ್ಡ್ ತಾನು ಮದುವೆಯಾಗುವ ಹುಡುಗಿಯೊಂದಿಗೆ ವಿದೇಶಕ್ಕೆ ಹೋಗುತ್ತಿರುವ ಸಂಗತಿ ಮನೆಯಲ್ಲಿ ಎಲ್ಲರಿಗೂ ಸಡಗರವನ್ನು ಉಂಟುಮಾಡಿತ್ತು.

ಆಸ್ಕರ್ ವೈಲ್ಡನಿಗೆ ವೀಸಾ ತಲುಪಿಸಲು ಪೂರ್ವಿಕಾ ಅವನನ್ನು ಭೇಟಿ ಮಾಡಲು ಬಯಸಿ ದಲಾಲ್ ಸ್ಟ್ರೀಟ್‌ನ ಅಸ್ಟೋರಿಯ ಹೋಟೆಲ್‌ಗೆ ಬೆಳಿಗ್ಗೆ ಎಂಟೂವರೆ ಗಂಟೆಗೆಲ್ಲ ಬರುವಂತೆ ಫೋನ್ ಮಾಡಿದ್ದಳು. ಆಸ್ಕರ್ ವೈಲ್ಡನಿಗೆ ದಲಾಲ್ ಸ್ಟ್ರೀಟ್ ಬಗ್ಗೆ ತಿಳಿದಿತ್ತು. ಭಾರತದ ಬಹುದೊಡ್ಡ ಸ್ಟಾಕ್ ಎಕ್ಸ್‌ಚೇಂಜ್ ಮಾರುಕಟ್ಟೆ ಇರುವುದು ಮುಂಬಯಿಯ ದಲಾಲ್ ಸ್ಟ್ರೀಟ್‌ನಲ್ಲಿ. ಪ್ರತಿದಿನ ದಲಾಲ್ ಸ್ಟ್ರೀಟ್‌ನಲ್ಲಿ ದುಡ್ಡು ಕಳೆದುಕೊಳ್ಳುವವರು ಎಷ್ಟು ಮಂದಿಯೋ! ಅದೃಷ್ಟ ಇರುವವರು ಕೆಲವೇ ನಿಮಿಷಗಳಲ್ಲಿ ಲಕ್ಷಾಧಿಪತಿಗಳೂ ಕೋಟ್ಯಧಿಪತಿಗಳೂ ಆಗುತ್ತಾರೆ. ಕೆಲವರು ಎಷ್ಟೇ ಶ್ರೀಮಂತರಾದರೂ ಷೇರು ಮಾರುಕಟ್ಟೆಗೆ ಕಾಲಿಡುವುದಿಲ್ಲ. ಬಡವರು, ಶ್ರೀಮಂತರೆನ್ನದೆ ಕೆಲವರು ಷೇರು ಆಟದ ವ್ಯಾಧಿಯನ್ನು ಬಲವಾಗಿ ಅಂಟಿಸಿಕೊಂಡಿರುತ್ತಾರೆ. ತುಂಬಾ ಸಂಯಮ ಇರುವ ಕೆಲವರು ಯಾವಾಗಲೋ ಒಮ್ಮೊಮ್ಮೆ ಷೇರುಗಳೊಂದಿಗೆ ಸರಸವಾಡುತ್ತಾರೆ. ಆದರೆ ಆಸ್ಕರ್ ವೈಲ್ಡನ ತಾತ ಗುನ್ನಾಲಾಲ್ ಆಗಲೀ, ತಂದೆ ಭವರ್ ಲಾಲ್ ಆಗಲಿ ಯಾವತ್ತೂ ಷೇರುಗಳೊಂದಿಗೆ ಆಟವಾಡಲಿಲ್ಲ. ಆದರೆ ತಮ್ಮ ಕಂಪನಿಗಳ ಷೇರು ಬೆಲೆಗಳು ಲೆಕ್ಕವಿಲ್ಲದಷ್ಟು ಬೆಳವಣಿಗೆಗಳನ್ನು ಕಂಡಿವೆ. ಅದಕ್ಕಾಗಿ ಸ್ಟಾಕ್ ಬ್ರೋಕರ್‌ಗಳನ್ನು ನೇಮಿಸಿದ್ದಾರೆ ಮತ್ತು ಅವರಿಗೆ ಒಳ್ಳೆಯ ಕಮಿಷನ್ ಕೊಡುತ್ತಿದ್ದಾರೆ. ಈ ಎಲ್ಲಾ ವಿಷಯಗಳು ಆಸ್ಕರ್ ವೈಲ್ಡನಿಗೆ ಚನ್ನಾಗಿ ಗೊತ್ತಿವೆ.

'ದಲಾಲ್ ಸ್ಟ್ರೀಟ್ ಏಕೆ? ಮೆರಿನ್ ಡ್ರೈವ್‌ಗೆ ಹೋಗಬಹುದಿತ್ತು. ರುಸ್ತುಂ ಪಾರ್ಲರ್‌ನಲ್ಲಿ ಒಳ್ಳೆಯ ಐಸ್‌ಕ್ರೀಮ್ ತಿಂದು ಬೀಚ್ ರೋಡಿನಲ್ಲಿ ಓಡಾಡಬಹುದಿತ್ತು' ಎಂದಿದ್ದ ಆಸ್ಕರ್ ವೈಲ್ಡ್.

'ಅದಕ್ಕೇನಂತೆ, ಅಲ್ಲಿಗೂ ಹೋಗೋಣ. ಮೊದಲು ದಲಾಲ್ ಸ್ಟ್ರೀಟ್‌ಗೆ ಬಾ. ಅಲ್ಲಿ ನನ್ನ **unique** ಟ್ಯಾಲೆಂಟ್ ಸ್ವಲ್ಪ ನಿಂಗೆ ತೋರಿಸ್ತೀನಿ. ಹೋಟೆಲ್ ರೂಮಲ್ಲಿ ಎರಡು ಗಂಟೆಗಳ ಕಾಲ ಮಾತ್ರ ಇದ್ದು ಹೊರಟುಬಿಡೋಣ' ಎಂದವಳ ಮಾತುಗಳಲ್ಲಿ ನಗು ತುಂಬಿತ್ತು. ಮಾರನೆಯ ದಿನ ಬೆಳಿಗ್ಗೆ ಸರಿಯಾಗಿ ಎಂಟೂವರೆಗೆ ಆಸ್ಕರ್ ವೈಲ್ಡ್ ಅಸ್ಟೋರಿಯ ಹೋಟೆಲ್ ತಲುಪಿದ್ದ. ಇವನಿಗಾಗಿ ರಿಸೆಪ್ಷನ್‌ನಲ್ಲಿ ಕಾದು ಕುಳಿತಿದ್ದ ಪೂರ್ವಿಕಾ ರೂಂ ನಂಬರ್ ಮೂವತ್ತಾರಕ್ಕೆ ಕರೆದೊಯ್ದಿದ್ದಳು.

'ಒಂಬತ್ತು ನನ್ನ ಫೇವರೆಟ್ ನಂಬರ್. ನಾನು ಎಲ್ಲಿಗೆ ಹೋದರೂ ಟೋಟಲ್ ಒಂಬತ್ತು ಬರುವ ರೂಮನ್ನೇ ಆಪ್ಟ್ ಮಾಡಿಕೊಳ್ಳುತ್ತೇನೆ. ನನ್ನ ಕಾರ್ ನಂಬರುಗಳೂ ಅಷ್ಟೆ' ಎನ್ನುತ್ತಾ ಸೋಫಾದ ಮೇಲೆ ಕೂರುತ್ತಾ **del DPS 16** ಲ್ಯಾಪ್‌ಟಾಪನ್ನು ಆನ್ ಮಾಡುತ್ತಾ 'ಸೋನಾ ನಿನಗೆ ಇವತ್ತಿನ ಖರ್ಚಿಗೆ ಎಷ್ಟು ಅಮೌಂಟ್ ಬೇಕು?' ಎಂದು ಕೇಳಿದ್ದಳು. ಕ್ಷಣ ಆಸ್ಕರ್ ವೈಲ್ಡ್ ಏನೂ ಅರ್ಥವಾಗದವನಂತಿದ್ದು, ನಂತರ 'ನನ್ನ ಬಳಿ ಬೇಕಾದಷ್ಟು ಇದೆ. ಲಾಸ್ಟ್ ವೀಕ್ ನೀನೇ ಫೋನ್‌ಪೇ ಆಪ್ಷನ್ ಡೌನ್ಲೋಡ್ ಮಾಡಿ ಕೊಟ್ಟಿಯಲ್ಲ' ಎಂದಿದ್ದ.

'ಇವತ್ತು ಆನ್‌ಲೈನ್ ಷೇರು ಬಿಸಿನೆಸ್ ಮಾಡಿ ಅರ್ಧ ಗಂಟೆಯಲ್ಲಿ ಇಪ್ಪತ್ತೈದು ಸಾವಿರವಾದರೂ ಸಂಪಾದನೆ ಮಾಡ್ತೀನಿ' ಎಂದಿದ್ದಳು ಲ್ಯಾಪ್‌ಟಾಪ್‌ನಲ್ಲಿ ಸರಸರ ಬೆರಳುಗಳನ್ನಾಡಿಸುತ್ತಾ.

'ರಿಯಲಿ ಮಾರ್ವಲಸ್, ಹೌ ಈಸ್ ಇಟ್ ಫಾರ್ ಯು' ಆಶ್ಚರ್ಯದಿಂದ ಕೇಳಿದ್ದ.

'ನಾನು ಡಿಗ್ರಿ ಫಸ್ಟ್ ಇಯರ್‌ನಲ್ಲಿದ್ದಾಗ ನನ್ನ ಫ್ರೆಂಡ್ ಮೈಥಿಲಿ, ಅದೇ ಲಾಸ್ ವೇಗಾಸ್‌ನಲ್ಲಿದ್ದಾಳೆಂದು ಹೇಳಿದೆನಲ್ಲ, ಅವಳ ಜೊತೆ ಆನ್‌ಲೈನ್‌ನಲ್ಲಿ ಆಟ ಆಡಿದ್ದೆ. ಐದು ಸಾವಿರ ಕಟ್ಟಿ ಜಸ್ಟ್ ಇಪ್ಪತ್ತು ನಿಮಿಷಗಳಲ್ಲಿ ಅವತ್ತು ನಾನು ಗಳಿಸಿದ್ದು ಒಂದು ಲಕ್ಷ. ಅದೇ ಮೈಥಿಲಿ ಇಪ್ಪತ್ತೈದು ಸಾವಿರ ಕಳೆದುಕೊಂಡಿದ್ದಳು. ಅವಳಿಗೆ ಷೇರು ಆಟ ಆಡಲು ಹಣವನ್ನು ನಾನೇ ಕೊಟ್ಟಿದ್ದೆ. ಅವೊತ್ತಿನಿಂದ ಒಂಥರಾ ಇಂಟರೆಸ್ಟ್ ಹುಟ್ಟಿ ಯಾವಾಗಲಾದರೊಮ್ಮೆ ಆಟ ಆಡ್ತಾ ಇರ್ತೀನಿ. ಒಂದೆರಡು ಮೂರು ಬಾರಿ ಹತ್ತದಿನೈದು ಸಾವಿರ ಕಳೆದುಕೊಂಡಿದ್ದು ಬಿಟ್ಟರೆ ಗೆದ್ದಿದ್ದೇ ಜಾಸ್ತಿ. ಯಾವುದೇ ಆಟದ ಲಯ ಕಂಡುಕೊಂಡರೆ ಆಟವಾಡುವುದು ತುಂಬಾ ಸುಲಭವಾಗಿಬಿಡುತ್ತದೆ. ಈ ದುಡ್ಡನ್ನು ನಾನು ಇಟ್ಟುಕೊಳ್ಳುವುದಿಲ್ಲ, ಬದಲಾಗಿ ಚಾರಿಟಬಲ್ ಸಂಸ್ಥೆಗಳಿಗೆ ಡೊನೇಟ್ ಮಾಡಿಬಿಡ್ತೀನಿ...' ಅವಳ ಮಾತುಗಳನ್ನು ಮಧ್ಯದಲ್ಲಿಯೇ ತುಂಡರಿಸಿ 'ರಿಯಲಿ ದಟ್ಸ್ ವಂಡರ್‌ಫುಲ್' ಎಂದು ಮೆಚ್ಚುಗೆಯನ್ನು ಸೂಚಿಸಿದ್ದ.

'ಎರಡೂವರೆ ಸಾವಿರಕ್ಕಿಂತಲೂ ಹೆಚ್ಚು ಕಂಪನಿಗಳು ಇಂದು ಮಾರುಕಟ್ಟೆಯಲ್ಲಿ ಷೇರುಗಳನ್ನು ಬಿಟ್ಟಿವೆ. ಅವುಗಳಲ್ಲಿ ಅರವತ್ತು, ಎಪ್ಪತ್ತು ಕಂಪನಿಗಳು ಪೈಪೋಟಿಯನ್ನು ನೀಡುತ್ತವೆ. ನಿಜ ಹೇಳಬೇಕೆಂದರೆ ಈ ಷೇರುಗಳು ಕಾಗದ ಪತ್ರಗಳಷ್ಟೇ. ಅವುಗಳನ್ನು ಹಣವನ್ನಾಗಿ ಕನ್ವರ್ಟ್ ಮಾಡುವುದೇ ಈ ಸ್ಟಾಕ್ ಎಕ್ಸ್‌ಚೇಂಜ್ ಕೆಲಸ. ಗೋಲ್ಡ್, ಆಯಿಲ್ ಮುಂತಾದ ಆನ್‌ಲೈನ್ ಸರಕುಗಳ ವ್ಯಾಪಾರ ಕೂಡ ಅಷ್ಟೆ. ನಿಜವಾಗಿಯೂ ಅಲ್ಲಿ ಸರಕುಗಳ ಎಕ್ಸಿಸ್ಟೆನ್ಸ್ ಇರುವುದೇ ಇಲ್ಲ. ಆದರೂ ಕೋಟ್ಯಂತರ ರೂಪಾಯಿ ವ್ಯವಹಾರ